ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ
Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ವಿರೇಶ್ ಎನ್ ವಿ | ಪಿ.ಡಬ್ಲ್ಯೂ. | 2 |
| ತಂದೆಯ ಹೆಸರು | : | ನರಸಿಂಹ ವಿ ಹೆಚ್ | ಸಿ.ಡಬ್ಲ್ಯೂ. | 3 |
| ವಯಸ್ಸು | : | 33 ವರ್ಷ | | |
| ಉದ್ಯೋಗ | : | ಪ್ರಥಮ ದರ್ಜೆ ಸಹಾಯಕ, ಸಿ ಜೆ ಆಸ್ಪತ್ರೆ. | | |
| ವಾಸ ಸ್ಥಳ | : | ದಾವಣಗೆರೆ. | | |

ದಿ.02.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** ಃ

1. ಈಗ್ಯೆ ಸುಮಾರು 7 ವರ್ಷಗಳಿಂದ ನಾನು ಸಿ.ಜಿ ಆಸ್ಪತ್ರೆಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನನ್ನ ಜೊತೆ ಚಾಸಾ.2 ರವರು ಸಹ ಕೆಲಸ ಮಾಡುತ್ತಿದ್ದರು. ಅವರು ಈಗ ಮೃತಪಟ್ಟಿದ್ದಾರೆ. ಚಾಸಾ.4 ರವರು ಸಹ ಸಿ ಜೆ ಆಸ್ಪತ್ರೆಯಲ್ಲಿ ಮನಶಾಸ್ತ್ರಜ್ಞರಾಗಿ ಕೆಲಸ ಮಾಡುತ್ತಿದ್ದಾರೆ.

3. ದಿನಾಂಕ 26.12.2019 ರಂದು ಸಿಜೆ ಆಸ್ಪತ್ರೆಯಿಂದ ನನಗೆ ಸಿಎನ್ ಪೋಲೀಸ್ ಠಾಣೆಗೆ ಹೋಗುವಂತೆ ನಮ್ಮ ಅಧೀಕ್ಷಕರು ನನ್ನನ್ನು ನಿಯೋಜನೆ ಮಾಡಿದ್ದರು. ನನ್ನೊಂದಿಗೆ ಚಾಸಾ.2 ಮತ್ತು ಚಾಸಾ.4 ರವರನ್ನು ಸಹ ನಿಯೋಗಿಸಿದ್ದರು. ನಮ್ಮನ್ನು ನಿಯೋಜನೆ ಮಾಡುವ ಸಂದರ್ಭದಲ್ಲಿ ಒಂದು ದಾಳಿ ಮಾಡಬೇಕಾಗಿದೆ ಬರುವಂತೆ ತಿಳಿಸಿದರು.

4. ನಂತರ ನಾವು ಸಿಎನ್ ಠಾಣೆಗೆ ಹೊದೆವು. ಆಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ಚಾಸಾ.1 ರವರು ನಮಗೆ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಅಲ್ಲಿ ದಾಳಿ ಮಾಡಬೇಕೆಂದು ತಿಳಿಸಿ ನಮಗೆ ನೋಟೀಸ್ ನೀಡಿದ್ದರು. ಸದರಿ ನೋಟೀಸು ಈಗಾಗಲೇ ನಿಪಿ.6 ಎಂದು

ಗುರುತಿಸಲಾಗಿದ್ದು, ನಿಪಿ.6 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಈಗಾಗಲೇ ಗುರುತಿಸಲಾಗಿದೆ.

5. ಇಲಾಖಾ ಜೀಪಿನಲ್ಲಿ ಪೋಲೀಸರು ನನ್ನನ್ನು ಚಾಸಾ.2 ಮತ್ತು ಚಾಸಾ.4 ರವನ್ನು ಕರೆದುಕೊಂಡು ಹೋದರು. ನಮ್ಮ ಹಿಂದಿನಿಂದ ಇನ್ನು 4 ಜನ ಪೋಲೀಸರು ಬೈಕ್ ನಲ್ಲಿ ಬಂದರು. ನಮ್ಮನ್ನು ಹೊಸ ಬಸ್ ನಿಲ್ದಾಣದ ಹಿಂಭಾಗದಲ್ಲಿ ಅಶೋಕ ಹೋಟೆಲ್, 2 ನೇ ಕ್ರಾಸ್ ಗಣೇಶ್ ಲೇಔಟ್ ಗೆ ಕರೆದುಕೊಂಡು ಹೋದರು. ಜೀಪನ್ನು ಒಂದು ಜಾಲಿ ಮರದ ಹತ್ತಿರ ನಿಲ್ಲಿಸಿ, ಸ್ವಲ್ಪ ಕಾಲದವರೆಗೆ ಅಲ್ಲಿಯೇ ಕಾಯುತ್ತಿದ್ದಾಗ, ಅಲ್ಲಿ ಅನುಮಾನಸ್ಪದವಾಗಿ ಮೂರು ಜನ ನಿಂತಿದ್ದರು.

6. ಮೂರು ಜನರ ಪೈಕಿ ಇಬ್ಬರ ಕೈಯಲ್ಲಿ ಕೈ ಚೀಲಗಳು ಇದ್ದವು. ಒಂದು ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಹಳದಿ ಮತ್ತು ಕೆಂಪು ಮಿಶ್ರಿತ ಕೈ ಚೀಲ ಮತ್ತು ಇನ್ನೊಂದು ಕೆಂಪು ಕೈ ಚೀಲ ಇದ್ದವು. ಅವರ ಮೇಲೆ ಚಾಸಾ.1 ರವರಿಗೆ ಅನುಮಾನ ಬಂದು, ಚಾಸಾ.1 ರವರು ಚಾಸಾ.13 ರವರ ಮೂಲಕ ರೂ.500/- ಗಳನ್ನು (ರೂ.100/- ನ ಐದು ನೋಟುಗಳು) ಕೊಟ್ಟು, ಆ ವ್ಯಕ್ತಿಗಳು ಯಾವುದೋ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆಂದು, ಸದರಿ ವಸ್ತುವನ್ನು ಕೊಂಡುಕೊಂಡು ಬರುವಂತೆ ಕಳುಹಿಸಿದರು.

7. ಚಾಸಾ.13 ರವರು ಸದರಿ ವ್ಯಕ್ತಿಗಳ ಬಳಿ ಹೋಗಿ ಎರಡು ಪ್ಯಾಕೇಟ್ ಗಳನ್ನು ಖರೀದಿಸಿ ತಂದರು. ಸದರಿ ಪ್ಯಾಕೇಟ್ ಗಳು ಪಾಲಿಥಿನ್ ಕವರ್ ಗಳು. ಸದರಿ ಪ್ಯಾಕೇಟಗಳನ್ನು ತೆರೆದು ನೋಡಲಾಗಿ, ಅದರಲ್ಲಿ ಒಣಗಿದ ಹಸಿರು ಬಣ್ಣದ ಸೊಪ್ಪು ಮತ್ತು ಮೊಗ್ಗು ಇದ್ದವು. ಸದರಿ ಸೊಪ್ಪು ಗಾಂಜಾ ಸೊಪ್ಪು ಎಂದು ಚಾಸಾ.1 ರವರು ಅಭಿಪ್ರಾಯ ಪಟ್ಟರು.

8. ಸದರಿ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿದ್ದರು. ಚಾಸಾ.13 ರವರು ರೂ.100/- ಅನ್ನು ಚಾಸಾ.1 ರವರಿಗೆ ವಾಪಾಸ್ ಕೊಟ್ಟರು. ನಂತರ ಪೋಲೀಸರು ಸದರಿ ಮೂರು ವ್ಯಕ್ತಿಗಳನ್ನು ಹಿಡಿದುಕೊಳ್ಳಲು ಹೋದಾಗ ಸದರಿ ವ್ಯಕ್ತಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ನಂತರ ಸದರಿ ವ್ಯಕ್ತಿಗಳನ್ನು ಪೋಲೀಸರು ಸುತ್ತುವರಿದು ಹಿಡಿದುಕೊಂಡರು.

9. ಸದರಿ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಮೊದಲನೇಯವರು ರೇವಣಸಿದ್ದಪ್ಪ (1 ನೇ ಆರೋಪಿ), ಎರಡನೇಯವರು ಸತೀಶ್ ಬಾಬುರಾವ್ (2 ನೇ ಆರೋಪಿ) ಮತ್ತು ಮೂರನೇಯವರು ಲೊಕೇಶ್ (3 ನೇ ಆರೋಪಿ) ಎಂದು ತಿಳಿಯಿತು. 1 ನೇ ಆರೋಪಿಯ ಬಳಿ ಹಳದಿ ಮತ್ತು ಕೆಂಪು ಮಿಶ್ರಿತ ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಒಂದು ಚೀಲ ಇತ್ತು, ಸದರಿ ಚೀಲದಲ್ಲಿ ನೋಡಲಾಗಿ 32 ಪಾಲಿಥಿನ್ ಕವರ್ ಗಳು ಇದ್ದವು. ಸದರಿ ಕವರ್ ಗಳಲ್ಲಿ ಸೊಪ್ಪುಗಳು ಇದ್ದವು. ಸದರಿ ಸೊಪ್ಪುಗಳು ಸಹ ಗಾಂಜಾ ಸೊಪ್ಪು ಅಗಿದ್ದವು. ಸದರಿ ಸೊಪ್ಪುಗಳು ಚಾಸಾ.13 ರವರು ಖರೀದಿಸಿ ತಂದಿದ್ದ ಎರಡು ಪ್ಯಾಕಗಳಲ್ಲಿ ಇರುವ ಸೊಪ್ಪುಗಳಿಗೆ ಹೋಲಿಕೆಯಾಗಿತ್ತು.

10. 2 ನೇ ಆರೋಪಿಯ ಬಳಿ ಇದ್ದ ಕೆಂಪು ಬಣ್ಣದ ಚೀಲದಲ್ಲಿ ನೋಡಿದಾಗ ಸದರಿ ಚೀಲದಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಗಾಂಜಾ ಸೊಪ್ಪು ಇದ್ದವು. ಸದರಿ ಗಾಂಜಾ ಸೊಪ್ಪುಗಳನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ 1 ನೇ ಆರೋಪಿಯ ಬಳಿ ಇದ್ದ ಚೀಲದಲ್ಲಿ 218 ಗ್ರಾಂ ಗಾಂಜಾ ಸೊಪ್ಪು ಇತ್ತು. 2 ನೇ ಆರೋಪಿಯ ಬಳಿ ಇದ್ದ ಚೀಲದಲ್ಲಿ 780 ಗ್ರಾಂ ಗಾಂಜಾ ಸೊಪ್ಪು ಇತ್ತು. ಸದರಿ ಗಾಂಜಾ ಸೊಪ್ಪುಗಳನ್ನು ಬಿಳಿ ಬಟ್ಟೆ ಹಾಕಿ ಪ್ಯಾಕ್ ಮಾಡಲಾಯಿತು.

11. ನಂತರ ಚಾಸಾ.4 ರವರು 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಆತನ ಬಳಿ ರೂ.1000/- (ರೂ.100/- ಮುಖಬೆಲೆಯ ಹತ್ತು ನೋಟುಗಳು) ಹಣ ಇತ್ತು. ಸದರಿ ಹಣ ಗಾಂಜಾ ಸೊಪ್ಪು ಮಾರಾಟ ಮಾಡಿದ ಹಣ ಎಂದು ತಿಳಿಸಿದರು. ಇವೆಲ್ಲಾವುಗಳ ಬಗ್ಗೆ ಮಧ್ಯಾಹ್ನ 12.40 ರಿಂದ ಮಧ್ಯಾಹ್ನ 02.30 ಗಂಟೆಯವರೆಗೂ ಪಂಚನಾಮೆಯನ್ನು ಮಾಡಿದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದೆ. ನಿಪಿ.10 ರಲ್ಲಿ ಸಾಕ್ಷಿಯ ಸಹಿ **ನಿಪಿ.10(ಇ)** ಎಂದು ಗುರುತಿಸಲಾಯಿತು.

12. ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ ಮೂವರು ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ.11 ರಿಂದ ನಿಪಿ.21 ಎಂದು ಗುರುತಿಸಲಾದ ಪೊಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

13. ಆ ದಿನ ವಶಪಡಿಸಿಕೊಂಡ ಕೈ ಚೀಲಗಳು, ಗಾಂಜಾ ಸೊಪ್ಪಿರುವ ಪಾಲಿಥಿನ್ ಕವರ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ವಸ್ತುಗಳು ಈಗಾಗಲೇ ಎಂ.ಓ.1, ಎಂ.ಓ.3 ಮತ್ತು ಎಂ.ಓ.4 ಎಂದು ಗುರುತಿಸಲಾಗಿದೆ. ಎಂ.ಓ.1 ಎಂದು ಗುರುತಿಸಲಾದ ವಸ್ತುವಿನ ಮೇಲೆ ಸಾಕ್ಷಿಯು ತನ್ನ ಸಹಿ ಇರುತ್ತದೆಂದು ಗುರುತಿಸಿರುತ್ತಾರೆ. ಎಂ.ಓ.2 ಎಂದು ಈಗಾಗಲೇ ಗುರುತಿಸಲಾದ ಒಂದು ಸಾವಿರ ರೂಪಾಯಿ ಹಣವನ್ನು ನೋಡಿದ್ದಲ್ಲಿ ಗುರುತಿಸುತ್ತೇನೆಂದು ಹೇಳುತ್ತಾರೆ. (ಟ್ರಜರಿ ಬಾಕ್ಸ್ ನಲ್ಲಿ ಸದರಿ ಹಣವನ್ನು ಇಡಲಾಗಿದೆ)

14. ನಂತರ ಮಾಲುಗಳ ಸಮೇತ ಆರೋಪಿಗಳನ್ನು ಠಾಣೆಗೆ ಕರೆತಂದರು.

**ಪಾಟೀ ಸವಾಲು :** ಆರೋಪಿತರ ಪರ ವಕೀಲರು ನಿಶಾನೆಯಾಗಿ ಗುರುತಿಸಿರುವ ದಾಖಲೆಗಳನ್ನು ಹೊಂದಿಸಿಕೊಳ್ಳುವ ಸಲುವಾಗಿ ಪಾಟೀ ಸವಾಲನ್ನು ಮುಂದೂಡುವಂತೆ ಕೋರಿದ್ದರ ಮೇರೆಗೆ, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.15.07.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಶ್ರೀ ಕೆ.ಹೆಚ್.ವಿ, ವಕೀಲರಿಂದ ಆರೋಪಿತರ ಪರವಾಗಿ** :

15. ಗಾಂಜಾ ಪ್ರಕರಣಗಳಲ್ಲಿ ನಾನು ಇದೇ ಮೊದಲ ಬಾರಿಗೆ ಸಾಕ್ಷಿ ಹೇಳಿದ್ದೇನೆ. ಗಾಂಜಾ ಪ್ರಕರಣಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಪ್ರಕರಣಗಳಲ್ಲಿ ನಾನು ಇದುವರೆಗೂ ಸಾಕ್ಷಿ ಹೇಳಿರುವುದಿಲ್ಲ. ನಾನು ಪೋಲೀಸ್‌ಗೆ ಸಂಬಂಧಿಸಿದ ಬಹಳ ಪ್ರಕರಣಗಳಲ್ಲಿ ಸಾಕ್ಷಿ ನೀಡಿದ್ದರೂ ಸಹ ಸಾಕ್ಷಿ ನೀಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ದಿನಾಂಕ 26.12.2019 ರಂದು ನಾನು ಸಿಜೆ ಆಸ್ಪತ್ರೆಯಲ್ಲಿ ಬೆಳಿಗ್ಗೆ 09.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿ ಬೆಳಿಗ್ಗೆ 11.30 ಗಂಟೆಯವರೆಗೆ ಸಿಜೆ ಆಸ್ಪತೆಯಲ್ಲಿ ಇದ್ದೆ. ಸಿಜೆ ಆಸ್ಪತ್ರೆಯಲ್ಲಿ ಬಯೋಮೆಟ್ರಿಕ್ ಇದೆ ಎಂದರೆ ಸರಿ. ಸಾಕ್ಷಿಯು ಮುಂದವರೆದು ಬೆಳಿಗ್ಗೆ ಕರ್ತವ್ಯಕ್ಕೆ ಹಾಜರಾದಾಗ ಲಾಗ್‌ಇನ್ ಆಗಿ ಡೆಪ್ಯೂಟೆಷನ್ ಇದ್ದಲ್ಲಿ ಪುನಃ ಲಾಗ್‌ಇನ್ ಕೊಡುವುದಿಲ್ಲ ಎಂದು ಹೇಳುತ್ತಾರೆ.

17. ನನ್ನ ಮೇಲಾಧಿಕಾರಿ ಕೊಟ್ಟ ಪತ್ರದಲ್ಲಿ ಸಮಯವನ್ನು ನಮೂದು ಮಾಡಿಲ್ಲ. ಸಾಕ್ಷಿಯು ಮುಂದುವರೆದು ಪೂರ್ವಹ್ನ ಎಂದು ಮಾತ್ರ ನಮೂದು ಮಾಡಿದ್ದಾರೆಂದು ಹೇಳುತ್ತಾರೆ. ಸಿಜೆ ಆಸ್ಪತ್ರೆಯನ್ನು ಬಿಟ್ಟಾಗ ಬೆಳಿಗ್ಗೆ 11.45 ಗಂಟೆಯಾಗಿತ್ತು. ಚಾಸಾ.2 ಮತ್ತು ಚಾಸಾ.4 ರವರು ಸಹ ಬೆಳಿಗ್ಗೆ 11.45 ಗಂಟೆಗೆ ಸಿಜೆ ಆಸ್ಪತ್ರೆಯನ್ನು ಬಿಟ್ಟರು. ನಾವು ಮೂವರು ವಿದ್ಯಾನಗರ ಪೋಲೀಸ್ ಠಾಣೆಗೆ ಹೊದಾಗ ಮಧ್ಯಾಹ್ನ 12.00 ಗಂಟೆಯಾಗಿತ್ತು.

18. ವಿದ್ಯಾನಗರ ಪೋಲೀಸ್ ಠಾಣೆಯಿಂದ ಘಟನಾ ಸ್ಥಳ 6 ರಿಂದ 7 ಕಿ.ಮೀ ದೂರ ಇದೆ. ಘಟನಾ ಸ್ಥಳವು ನಾವು ನಿಂತಿದ್ದ ಸ್ಥಳದಿಂದ 200 ಅಡಿ ದೂರದಲ್ಲಿದೆ. ಮೂರು ಜನ ಆರೋಪಿತರು ಒಬ್ಬರಿಗೊಬ್ಬರು ಒಂದು ತೋಳಿನ ಅಂತರದಲ್ಲಿ ನಿಂತಿದ್ದರು. ಮೂವರು ಆರೋಪಿತರು ಪ್ಯಾಂಟ್ ಶರ್ಟ್ ಧರಿಸಿದ್ದರು. ಆರೋಪಿ ರೇವಣಸಿದ್ದಪ್ಪ ರವರ ಬಳಿ ಟವೇಲ್ ಇತ್ತು.

19. ನಾನು ಬಿ.ಕಾಂ ವಿದ್ಯಾಭ್ಯಾಸ ಮಾಡಿದ್ದೇನೆ. ಚಾಸಾ.1 ರವರು ಚಾಸಾ.13 ರವರಿಗೆ ಕೊಟ್ಟ ನೋಟುಗಳ ನಂಬರ್ ಗಳನ್ನು ನಾನು ಬರೆದುಕೊಂಡಿಲ್ಲ. ನೋಟುಗಳಿಗೆ ಬಣ್ಣ ಹಚ್ಚಿ ಕೊಟ್ಟಿಲ್ಲ ಹಾಗೆಯೇ ಕೊಟ್ಟರು. ನೋಟುಗಳನ್ನು ಚಾಸಾ.1 ರವರು ಶರ್ಟ್ ಜೇಬಿನಿಂದ ತೆಗೆದುಕೊಟ್ಟರು. ಆ ದಿನ ನನ್ನ ಬಳಿ ಯಾವುದೇ ಹಣ ಇರಲಿಲ್ಲ. ಚಾಸಾ.1 ರವರ ಬಳಿ ಒಟ್ಟು ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ.

20. ಆರೋಪಿತರನ್ನು ದೂರದಿಂದ ವಾಚ್ ಮಾಡುತ್ತಿದ್ದ ಸಂದರ್ಭದಲ್ಲಿ ಆರೋಪಿತರ ಬಳಿ ಬೇರೆ ಯಾವುದೇ ಸಾರ್ವಜನಿಕರು ಗಾಂಜಾ ಖರೀದಿ ಮಾಡುತ್ತಿರಲಿಲ್ಲ. ಆರೋಪಿ ರೇವಣಸಿದ್ದಪ್ಪ ರವರ ಬಳಿ ಹಳದಿ ಬಣ್ಣದ ಒಂದು ಚೀಲ ಇತ್ತು.

21. ಚಾಸಾ.4 ರವರು ನಮ್ಮ ಜೊತೆ ಇದ್ದರು. ಪ್ರತಿ ಪ್ಯಾಕೇಟ್ ಗಳನ್ನು ಪ್ರತ್ಯೇಕವಾಗಿ ತೂಕ ಮಾಡಿಲ್ಲ. ಚೀಲ ಸಮೇತ ತೂಕ ಮಾಡಿದರು. ಒಟ್ಟು ಎರಡು ಚೀಲಗಳು ಇದ್ದವು. ಒಂದು ಚೀಲದಲ್ಲಿ ಪ್ಯಾಕೇಟ್ ಗಳು ಇದ್ದವು. ಇನ್ನೊಂದು ಚೀಲದಲ್ಲಿ ಕರಿ ಕವರ್ ನಲ್ಲಿ ಸೊಪ್ಪುಗಳು ಇದ್ದವು. ಸದರಿ ಸೊಪ್ಪುಗಳು ಗಾಂಜಾ ಸೊಪ್ಪುಗಳು ಎಂದು ಚಾಸಾ.1 ರವರು ಹೇಳಿದರು.

22. ಚಾಸಾ.13 ರವರು ಆರೋಪಿತರ ಬಳಿ ಗಾಂಜಾವನ್ನು ಖರಿದಿ ಮಾಡಲು ಹೋದಾಗ ಆರೋಪಿತರು ಓಡಿ ಹೋಗಲು ಪ್ರಯತ್ನಪಟ್ಟಿಲ್ಲ. ಘಟನಾ ಸ್ಥಳದ ಹತ್ತಿರಲ್ಲಿ ಅಶೋಕ ಹೋಟೇಲ್ ಮತ್ತು ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣ ಇದೆ ಎಂದರೆ ಸರಿ. ಅಶೋಕ ಹೊಟೇಲ್ ದೊಡ್ಡ ಕಟ್ಟಡ ಆಗಿದ್ದು, ಕೆ.ಎಸ್,ಆರ್.ಟಿ.ಸಿ ಸಹ ದೊಡ್ಡ ಕಟ್ಟಡವಾಗಿದ್ದು, ಫೊಟೋಗಳನ್ನು ತೆಗೆದಲ್ಲಿ ಎರಡೂ ಕಟ್ಟಡಗಳು ಕಾಣಿಸುತ್ತವೆ ಎಂದರೆ ಸರಿ.

23. ವಿದ್ಯಾನಗರ ಪೋಲೀಸ್ ಠಾಣೆಗೆ ಗಾಂಜಾ ಪ್ರಕರಣಗಳ ಪೈಕಿ ಎರಡು ಪ್ರಕರಣಗಳಿಗೆ ಬೇಟಿ ಕೊಟ್ಟಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿಕೊಂಡು ಪುನಃ ವಿದ್ಯಾನಗರ ಪೋಲೀಸ್ ಠಾಣೆಗೆ ಹೋಗಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ ನನ್ನ ಹೇಳಿಕೆ

ಪಡೆದುಕೊಂಡಿಲ್ಲ.

24. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರೊಂದಿಗೆ ದಾಳಿಗೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಪೊಟೋಗಳನ್ನು ವಿದ್ಯಾನಗರ ಪೋಲೀಸ್ ಠಾಣೆಯ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ದಾಖಲೆಗಳಿಗೆ ನಾನು ವಿದ್ಯಾನಗರ ಪೋಲೀಸ್ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಕಂಠಪಾಠ ಮಾಡಿಕೊಂಡು ಬಂದು ಪೋಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.